ಫಾರೆಸ್ಟ್.

ಇಸ್ತಿಹಾರ್ನ್ಮ ಮಾ.

ತಾರೀಖು 31ನೇ ಮಾರ್ಚಿ 1903.

ನಂ. 603—5983, ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 35ನೇ ಪ್ರಕರಣದ ವಿಧಿಗಳನುಸರಿಸಿ ಮೈಸೂರು ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಇದಕ್ಕೆ ಜಂಟಿಸಿರುವ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಮೇರೆಗಳುಳ್ಳ ಭೂಮಿಯು, 1901ನೇ ಅಕ್ಟೋಬರ್ 2ನೇ ಮತ್ತು ಂ 245–1300ನೇ ನಂಬರ್ ಗೆಜೆಟ್ ಇಸ್ತಿಹಾರ್ನ್ಮೆಯಲ್ಲಿ ಘೋಷಿತವಾದ ಡಿಸ್ಟ್ರಿಕ್ಟ್ ಫಾರೆಸ್ಟ್ ಗಳ ಆಡಳಿತಕ್ಕಾಗಿ ಏರ್ಪಟ್ಟ ಸಾಮಾನ್ಯ ನಿಬಂಧನೆಗಳ ಉದ್ದೇಶಗಳಿಗೋಸ್ಕರ ಉಳಿಸಿಕೊಂಡಿರುವ ಭೂಮಿಯಾಗಿರತಕ್ಕದ್ದು :—

ಷೆಡ್ಯೂಲ್.

ಡಿಸ್ಟ್ರಿಕ್ಟ್.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು	ಸ್ಥಳ ವ ಚಕ್ಕುಬಂದಿ.
ತುಮಕೂರು.	ಚಿಕ್ಕನಾಯಕನಹಳ್ಳಿ.	2 ಚದರ ಮೈಲಿ, 42 ಎಕರೆ, 36 ಗುಂಟೆ.	ಬರಗೇಹಳ್ಳಿ.	**ಸ್ಥಳ**—ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದಿನಕೆರೆ ಹೋಬಳಿಯಲ್ಲಿ ಇರುವ ಡಿಸ್ಟ್ರಿಕ್ಟ್ ಜಂಗಲ್ ಪ್ರದೇಶ. **ಚಕ್ಕುಬಂದಿ.** **ಉತ್ತರಕ್ಕೆ.**—ಸೂಲಾಪುರಗ್ರಾಮದ ಸರ್ವೆ ನಂ. 5ನೇ ನೈರುತ್ಯ ಮೂಲೆಯಿಂದ ಲೈನ್ ಪುರುವಾಗಿ ಅದೇ ನಂಬರಿನ ದಕ್ಷಿಣ ಭಾಗವಾಗಿ ಈಶಾನ್ಯ ದಿಕ್ಕಿಗೆ ಸದರಿ ಸರ್ವೆ ನಂ. 5ನೇ ಜಮೀನ್ ಹದ್ದು ಮತ್ತು ಬರಗೇಹಳ್ಳಿ ಸರ್ವೆ 67, 68, 69ನೇ ನಂಬರುಗಳ ಹದ್ದು ಸಹ ಕೀರುವ ಕಡೆಗೆ ಹೋಗುತ್ತದೆ. ನಂತರ ಆಗ್ನೇಯಕ್ಕೆ ತಿರಿಗಿ ಬರಗೇಹಳ್ಳಿ 69, 70, 66, 65, 50, 49, 29 ವ 30ನೇ ನಂಬರುಗಳ ಉದ್ದಕ್ಕೂ ಬಂದು, ಕಡೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ದಕ್ಷಿಣಕ್ಕೆ ಬರಗೇಹಳ್ಳಿ ಸರ್ವೆ 26 ವ 27ನೇ ನಂಬರುಗಳ ಬಾಜೂದಲ್ಲಿ ಬಂದು, ಕಡೇ ನಂಬರಿನ ನೈರುತ್ಯ ಮೂಲೆಗೆ ತಗಲುತ್ತದೆ. ಆಮೇಲೆ ಪೂರ್ವಕ್ಕೆ ಮೇಲೆ ಕಂಡ ಸರ್ವೆ 27ನೇ ನಂಬರು ಉದ್ದಕ್ಕೂ ಹೊರಟು ಅದರ ಆಗ್ನೇಯ ಮೂಲೆಗೆ ಕೀರುತ್ತದೆ. ನಂತರ ಉತ್ತರಕ್ಕೂ ಈಶಾನ್ಯಕ್ಕೂ ತಿರಿಗಿ ಬರಗೇಹಳ್ಳಿ ಸರ್ವೆ 27 ವ 26ನೇ ನಂಬರುಗಳ ಬಾಜೂದಲ್ಲಿ ಹೊರಟು, ಕಡೆ ಸರ್ವೆ ನಂ. ಈಶಾನ್ಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಆಗ್ನೇಯ ದಿಕ್ಕಿಗೆ ಬರಗೇಹಳ್ಳಿ ಸರ್ವೆ 22 ಮತ್ತು 21 ಮತ್ತು ಭೂಸನಕಟ್ಟೆ 2 ಮತ್ತು 3ನೇ ನಂಬರುಗಳ ಬಾಜೂದಲ್ಲಿ ಬಂದು, ಕಡೇ ನಂಬರಿ ಆಗ್ನೇಯ ಮೂಲೆಗೆ ಹೋಗುತ್ತದೆ. **ಪೂರ್ವಕ್ಕೆ.**—ಅಲ್ಲಿಂದ ನೈರುತ್ಯಕ್ಕಾಗಿ ಹಡವನಕಟ್ಟೆ 18ನೇ ನಂಬರ್ ಬಾಜೂದಲ್ಲಿ ಹೊರಟು ಅದರ ನೈರುತ್ಯ ಮೂಲೆಗೆ ಮುಟ್ಟುತ್ತದೆ. ನಂತರ ಆಗ್ನೇಯ ದಿಕ್ಕಾಗಿ ಅದೇ ಗ್ರಾಮದ ಸರ್ವೆ 18, 15, 16ನೇ ನಂಬರುಗಳ ಉದ್ದಕ್ಕೂ ಬಂದು, ಕಡೇ ನಂಬರ್ ನೈರುತ್ಯ ಮೂಲೆಗೆ ಕೀರುತ್ತದೆ. ಅಲ್ಲಿಂದ ಈಶಾನ್ಯಕ್ಕಾಗಿ ಮೇಲಿನ ಸರ್ವೆ 16ನೇ ನಂಬರ್ ಬಾಜೂದಲ್ಲಿ ಹೊರಟು ಅದೇ ನಂಬರ್ ಮತ್ತು ಅದರಗಲ್ಲು ಗ್ರಾಮದ ಸರ್ವೆ 115ನೇ ನಂಬರ್ ಮಧ್ಯೆ ಇರುವ ಬಾಂದಿಗೆ ಕೀರುತ್ತದೆ. ಆಮೇಲೆ ಆಗ್ನೇಯಕ್ಕಾಗಿ ಅದರಗಲ್ಲು ಗ್ರಾಮದ ಸರ್ವೆ 115, 114, 113 ವ 108ನೇ ನಂಬರುಗಳ ಉದ್ದಕ್ಕೂ ಬಂದು ಅದೇ ಗ್ರಾಮದ 108 ವ 102ನೇ ನಂಬರುಗಳ ಮಧ್ಯೆ ದಲ್ಲಿ ಇರುವ ಬಾಂದುಗಳಿಗೆ ಹೋಗುತ್ತದೆ. ಆ ಬಳಿಕ ನೈರುತ್ಯ ದಿಕ್ಕಾಗಿ ಅದೇ ಗ್ರಾಮದ ಸರ್ವೆ 102ನೇ ನಂಬರ್ ಬಾಜೂದಲ್ಲಿ ಹಾದು ಅದರ ನೈರುತ್ಯ ಮೂಲೆಗೆ ಕೀರುತ್ತದೆ. **ದಕ್ಷಿಣಕ್ಕೆ.**—ಅಲ್ಲಿಂದ ವಾಯವ್ಯ ದಿಕ್ಕಿಗೆ ಅದರಗಲ್ಲು ಗ್ರಾಮದ 106ನೇ ನಂಬರ್ ಉದ್ದಕ್ಕೂ ಬಂದು, ಹೊನ್ನಕಟ್ಟೆಹಳ್ಳಿ 53ನೇ ನಂಬರ್ ಬಾಜೂದಲ್ಲಿ ಹೊರಟು ಅದೇ ನಂಬರ್ ವಾಯವ್ಯ ಮೂಲೆಗೆ ಕೀರುತ್ತದೆ. ನಂತರ ಅದೇ ಗ್ರಾಮದ 22ನೇ ನಂಬರ್ ಒಳಗೆ ಹಾದು ಬರಗೇಹಳ್ಳಿ, 28ನೇ ನಂಬರ್ ನೈರುತ್ಯ ಮೂಲೆಗೆ ಕೀರುತ್ತದೆ. ನಂತರ ಹೊನ್ನಕಟ್ಟೆಹಳ್ಳಿ ಸರ್ವೆ 22ನೇ ನಂಬರ್ ಉತ್ತರಭಾಗದಲ್ಲಿ ಸ್ವಲ್ಪದೂರ ಹೋಗಿ ನಂತರ ದಕ್ಷಿಣಕ್ಕೆ ತಿರಿಗಿ ಅದೇ ನಂಬರು ಮಳಿಗೆ ಬಂದು ಗುಟ್ಟೆ ಬುಡದಲ್ಲಿ ಬಂದು ಹೊನ್ನಕಟ್ಟೆಹಳ್ಳಿ ಸರ್ವೆ 18 ಮತ್ತು ಸಜ್ಜೆನಹಳ್ಳಿ ಸರ್ವೆ 43ನೇ ನಂಬರುಗಳ ಮಧ್ಯೆ ದಲ್ಲಿ ಬೌಂಡರಿ ಬಾಂದಿಗ ತಗಲುತ್ತದೆ. ಬಳಿಕ ಪಶ್ಚಿಮಕ್ಕೆ ಸಜ್ಜೆನಹಳ್ಳಿ ಸರ್ವೆ 43, 42, 38ನೇ ನಂಬರುಗಳ ಉತ್ತರ ಭಾಗದಲ್ಲಿ ಹಾದು ಕಡೇ ಸರ್ವೆ ನಂಬರ್ ನಾಯವ್ಯ ಮೂಲೆಗೆ ಹೋಗುತ್ತದೆ. **ಪಶ್ಚಿಮಕ್ಕೆ.**—ಅಲ್ಲಿಂದ ಈಶಾನ್ಯ ದಿಕ್ಕಾಗಿ ಹಾಲಮಲೆ ದೇವರಹಳ್ಳಿ ಕಾವಲಿನ ಪೂರ್ವಭಾಗದ ಗಡಿ ಬಾಜೂದಲ್ಲಿ ಬಂದು, ಅದರ ಪೂರ್ವ ದಿಕ್ಕಿನ ಬುಡ ಮೂಲೆಗೆ ತಗಲುತ್ತದೆ. ಆ ನಂತರ ವಾಯವ್ಯ ದಿಕ್ಕಿಗೆ ಅದೇ ಕಾವಲ್ ಬಾಜೂದಲ್ಲಿ ಬಂದು, ಷುರುಹೊರಟಸ್ಥಳಕ್ಕೆ ಕೂಡುತ್ತದೆ.

ಹುಕುಂ ಬಮೋಜೀಬ್,

ಜಿ. ಇ. ರಿಕೆಟ್ಸ್,

ಫಾರ್ ಆಫಿಷಿಯೇಟಿಂಗ್ ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಸೆಕ್ರೆಟರಿ.